ಆದೂ ಬರಲಿಲ್ಲ. ಹಾಗಾಗಿ, ಒಟ್ಟಾರೆ ಪವರ್ ಆಗಾಗ ಹೋಗುತ್ತಲೇ ಇರುತ್ತದೆ. ಆದಕ್ಕೆ, ಅಕ್ಕೂರ್ ಮೊಳಿ ಸ್ಟೇಷನ್ ಕೂಡಲೇ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ, ಇದು ಅಕ್ಕೂರುಮೊಳಿ ಒಂದು ಟರ್ನ್‌ಕೀ ಪ್ರಾಜೆಕ್ಟ್ ಎಂದು ಕನ್ನಿಡರ್ ಮಾಡಿ ಗುತ್ತಿಗೆಗೆ ಕೊಟ್ಟಿದ್ದೇವೆ. ಗುತ್ತಿಗೆದಾರರಿಗೆ ಬೇಕಾದಂತಹ ಸಾಮಗ್ರಿಗಳನ್ನು ನಾವೇ ಒದಗಿಸಿಕೊಟ್ಟು ತ್ವರಿತಗತಿಯಲ್ಲಿ ಕೆಲಸವನ್ನು ಮಾಡಬೇಕು ಎಂದು ಅವರಿಗೆ ಹೇಳಿದ್ದೇವೆ. ಇದು 1993ರ ಏಪ್ರಿಲ್ ಅಂತ್ಯದ ವೇಳೆಗೆ 66 ಕೆ.ವಿ. ಮಾರ್ಗದ ನಿರ್ಮಾಣ ಕೆಲಸ ಪ್ರಾರಂಭ ಮಾಡಿ 1993–94ರ ಅವಧಿಯ ಕೊನೆಯಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಕೆಲಸ ವಿಳಂಬವಾಗಿದೆ ಎಂದು ಏನು ಅಭಿಪ್ರಾಯಪಟ್ಟಿದ್ದೀರಿ, ಅದರ ಆಧಾರದ ಮೇಲೆ ಈ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಬೇಕು ಎಂದು ನಿರ್ದೇಶನ ಕೊಡುತ್ತೇನೆ.

ಶ್ರೀ ಶೈಲಂ ಜಲಾಶಯದಿಂದ ಅಕ್ರಮವಾಗಿ ನೀರು ಬಿಡುವ ಯೋಜನೆ

316 (924): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ನದಿಯ ಜಲಾನಯನ ಪ್ರದೇಶದಿಂದ ಹೊರಗಿನ ಪ್ರದೇಶಗಳಿಗೆ ಆಂಧ್ರ ಸರ್ಕಾರವು ಶ್ರೀಶೈಲಂ ಜಲಾಶಯದಿಂದ ಅಕ್ರಮವಾಗಿ ನೀರು ಬಿಡುವ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಅಕ್ರಮ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ವಿಶ್ವಬ್ಯಾಂಕ್ ನೆರವು ಕೊಡಿಸಲು ಪ್ರಯತ್ನ ಮಾಡುತ್ತಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯದ ರೈತರಿಗೆ ಅನ್ಯಾಯ ಆಗುವ ಈ ಯೋಜನೆಯನ್ನು ತಡೆಹಿಡಿಯವುದರಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಹೌದು.

ಆ) ಇದರ ಬಗ್ಗೆ ಈ ಸರ್ಕಾರದಲ್ಲಿ ಮಾಹಿತಿ ಇರುವುದಿಲ್ಲ.

ಇ) ಮದ್ರಾಸ್ ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಯ ನೆಪದಲ್ಲಿ ಪ್ರತಿ ವರ್ಷ ಸುಮಾರು 300 ಟಿಎಂಸಿ ಪ್ರಮಾಣದ ನೀರನ್ನು ಕೃಷ್ಣಾ ಜಲಾನಯನ ಪ್ರದೇಶದಿಂದ ಹೊರಗಿನ ಪ್ರದೇಶಗಳಿಗೆ ನೀರಾವರಿಗಾಗಿ ಹಾಯಿಸಬಹುದಾದ ತೆಲುಗು ಗಂಗಾ ಯೋಜನೆಗೆ ಅನುಮತಿ ನೀಡಬಾರದೆಂದು ಕೇಂದ್ರ ಸರ್ಕಾರಕ್ಕೆ ಕರ್ನಾಟಕವು ಈ ಹಿಂದೆಯೇ ಆಕ್ಷೇಪಿಸಿರುವುದಲ್ಲದೆ, ಈ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವ ಬಗ್ಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ವೈ. ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಆಂಧ್ರಪ್ರದೇಶದವರು ಕೃಷ್ಣಾ ಕೊಳ್ಳದಿಂದ ನೀರನ್ನು ಅಕ್ರಮವಾಗಿ ಉಪಯೋಗಿಸಿಕೊಳ್ಳುತ್ತಿರುವುದು ಸತ್ಯ ಎನ್ನುವ ಮಾತನ್ನು ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ದುರಾದೃಷ್ಟ ಏನೆಂದರೆ ಈ ಒಂದು ಅಕ್ರಮ ನೀರನ್ನು ಉಪಯೋಗಿಸಿಕೊಳ್ಳುವುದನ್ನು ನಾವು ತಡೆಯಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕುಳಿತುಕೊಂಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಭಾಧ್ಯಕ್ಷರೇ, ಇದು ಒಪ್ಪಂದದ ವೈಲೇಶನ್ ಆಗಿದೆ. ಆಂಧ್ರಪ್ರದೇಶ ಸರ್ಕಾರ, ಕರ್ನಾಟಕ ಸರ್ಕಾರ ಮತ್ತು ತಮಿಳುನಾಡು ಸರ್ಕಾರ 5–5

ಟಿ.ಎಂ.ಸಿ. ನೀರನ್ನು ಮದ್ರಾಸಿಗೆ ಕುಡಿಯುವ ನೀರು ಕೊಡಬೇಕು ಎನ್ನತಕ್ಕಂಥ ಆಧಾರದ ಮೇಲೆ ಕಾಲುವೆ ಮಾಡಿಕೊಂಡು ಹೋದರು. ನನಗೆ ಇರುವ ಮಾಹಿತಿ ಪ್ರಕಾರ 1500 ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗಲಿಕ್ಕೆ ಬೇಕಾದಂತಹ ಕಾಲುವೆಯಲ್ಲಿ 11,500 ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗುವಷ್ಟು ದೊಡ್ಡ ಕಾಲುವೆಯನ್ನು ಮಾಡಿಕೊಂಡು ಹೋಗಿದ್ದಾರೆ. ನಮ್ಮ ಸರ್ಕಾರ ಈ ಸಲುವಾಗಿ ಚಕಾರ ಶಬ್ದ ಎತ್ತಿಲ್ಲ. ಇದರ ಜೊತೆಗೆ ಅವರೇ ಹೇಳಿದ್ದಾರೆ, 300 ಟಿ.ಎಂ.ಸಿ. ನೀರನ್ನು ಅಕ್ರಮವಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು. ಇಷ್ಟೆಲ್ಲಾ ಇದ್ದರೂ ಕೂಡ ಅಧಿಕಾರಿಗಳು ತಮಗೆ ಏನು ಮಾಹಿತಿ ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. 4 ತಿಂಗಳಲ್ಲಿ 175 ಟಿ.ಎಂ.ಸಿ. ಮತ್ತು 2 ತಿಂಗಳಲ್ಲಿ 350 ಟಿಎಂಸಿ ನೀರನ್ನು ಅಕ್ರಮವಾಗಿ ಕುಡಿಯುವ ನೀರಿನ ನೆಪದಲ್ಲಿ ತೆಗೆದುಕೊಂಡು ಹೋಗಿರುವ ಸತ್ಯ ಸರ್ಕಾರದ ಮುಂದೆ ಇದೆ. ಇವತ್ತು ನಾನು ಒಂದು ಪ್ರಶ್ನೆಯನ್ನು ತಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರಕ್ಕೆ ತಾವು ಒಂದು ಕಾಗದ ಬರೆದು ಸುಮ್ಮನೆ ಕೂರುವುದರಿಂದ ಅಂದರೆ ರಾಜ್ಯದ ಜನರ ಹಿತಾಸಕ್ತಿಯನ್ನು ಕಾಪಾಡುವುದರಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆದು ಒತ್ತಾಯ ತಂದಿದೆಯೆಂದು ಹೇಳಿದ್ದೀರಿ. ಇಷ್ಟು ಸಾಕೇ ? ಸ್ವಾಮಿ, ತೆಲುಗು ಗಂಗಾ ವಿಚಾರದಲ್ಲಿ ಈ ಕಡೆ ಕುಳಿತುಕೊಂಡಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ಏನು ಮಾತನಾಡಿದ್ದಾರೆನ್ನುವುದನ್ನು ನಾನು ಓದುತ್ತೇನೆ. ಇಷ್ಟು ಸಾಕೆ? ಈ ರಾಜ್ಯದ ಮುಖ್ಯಮಂತ್ರಿಗಳು ರಾಷ್ಟ್ರ ರಾಜಕಾರಣದ ತೆವಲು ತೀರಿಸಿಕೊಳ್ಳಲು ರಾಜ್ಯದ ಹಿತಾಸಕ್ತಿಯನ್ನು ಮಾರುತ್ತಿದ್ದಾರೆ ಎನ್ನುವಂಥ ಎತ್ತರದ ಮಾತುಗಳನ್ನು ಇಲ್ಲಿ ಕುಳಿತು ಮಾನ್ಯ ಮುಖ್ಯಮಂತ್ರಿಗಳು ಆಡಿದ್ದಾರೆ. ಅದೇ ಪ್ರಶ್ನೆಯನ್ನು ನಾನು ಇವತ್ತು ತಮಗೆ ಕೇಳಲೇ ಈ ರಾಜ್ಯದ ಹಿತವನ್ನು ಬಲಿ ತೆಗೆದುಕೊಂಡು ನಿಮ್ಮ ಸ್ಥಾನಮಾನಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರಧಾನ ಮಂತ್ರಿಗಳನ್ನು ಮೆಚ್ಚಿಸಲಿಕ್ಕಾಗಿ ಸುಮ್ಮನೆ ಕುಳಿತುಕೊಂಡಿದ್ದೀರಾ ? ಕೇಂದ್ರ ಸರ್ಕಾರಕ್ಕೆ ಒಂದು ಅರ್ಜಿ ಬರೆದು ಬಿಸಾಕುವುದರಿಂದ ರಾಜ್ಯದ ಕೃಷ್ಣಾ ಕೊಳ್ಳದಲ್ಲಿರತಕ್ಕಂಥ ಜನರ ಹಿತ ಸಾಧನೆ ಮಾಡುವುದಕ್ಕೆ ಸಾಧ್ಯವೇ ? ಇನ್ನೊಂದು ಬಹಳ ಮುಖ್ಯವಾದುದು. There is an agreement between the Parties. One of the Parties has violated it. Can this Government say that they are not going to honour the agreement?

ಈ ನಿರ್ದಿಷ್ಟವಾದ ಪ್ರಶ್ನೆಗೆ ಹಾರಿಕೆ ಉತ್ತರ ನನಗೆ ಬೇಕಾಗಿಲ್ಲ. ಈಗ ಅವರು ಒಪ್ಪಂದವನ್ನು ಮುರಿದಿದ್ದಾರೆ. ನನ್ನ ಮಾಹಿತಿ ಪ್ರಕಾರ 40% of the water is being used outside the basin. That means it is a clear violation of the agreement. Is the Government going to say that we are not going to honour the agreement?

ಶ್ರೀ ಎಸ್. ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ, ಬಹಳ ಸೂಕ್ಷ್ಮವಾದಂತಹ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಉತ್ತರದಲ್ಲಿ ಹೇಳಿದ ಪ್ರಕಾರ ರಾಜ್ಯ ಸರ್ಕಾರ ಕೇವಲ 5 ಟಿ.ಎಂ.ಸಿ ನೀರನ್ನು ಮದ್ರಾಸಿಗೆ ಕುಡಿಯುವ ನೀರನ್ನು ದೊರಕಿಸಿಕೊಡುವ ಮಟ್ಟಿಗೆ ಮಾತ್ರ ಒಪ್ಪಿರತಕ್ಕಂಥಾದ್ದು. ಮಿಕ್ಕ ಯಾವುದೇ ವಿಚಾರದಲ್ಲಿ ರಾಜ್ಯ ಸರ್ಕಾರ ತನ್ನ ಸಮರ್ಥನೆ ಕೊಟ್ಟಿಲ್ಲ.

1977ನೇ ಇಸವಿಯಲ್ಲಿ ಈ ಒಪ್ಪಂದವಾದ ಮೇಲೆ, ಆಂಧ್ರಪ್ರದೇಶ ಸರಕಾರದವರು ಅಲ್ಲಿ ಒಂದು ದೊಡ್ಡ ಪ್ರಮಾಣದ ಕಾಲುವೆಯನ್ನು ತೆಗೆಯುತ್ತಾ ಇದ್ದಾರೆ ಎನ್ನುವುದು ವಸ್ತುಸ್ಥಿತಿಯಾಗಿದೆ. ಮತ್ತು ಆ ಕಾಲುವೆಯ ಸಾಮರ್ಥ್ಯ ಎಷ್ಟು ಅಂದರೆ ಸುಮಾರು 300 ಟಿಎಂಸಿ ನೀರನ್ನು ತೆಗೆದುಕೊಂಡು ಹೋಗತಕ್ಕಂಥ ಕೆಪಾಸಿಟಿಯನ್ನು ಅವರು ಕ್ರಿಯೇಟ್ ಮಾಡತಕ್ಕದ್ದಾಗಿದೆ. ಇದರ ಬಗ್ಗೆ ನಮ್ಮ

ರಿಸರ್ವೇಶನ್ಸ್ ಏನು ಎನ್ನುವುದನ್ನು 1984–85ನೇ ಇಸವಿಯಲ್ಲಿ ನಾವು ತಿಳಿಸಿದ್ದೇವೆ. ಮತ್ತು ಇತ್ತೀಚೆಗೆ ನಡೆದ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ಕರ್ನಾಟಕ ರಾಜ್ಯ ತನ್ನ ಹಿತವನ್ನು ಕಾಪಾಡತಕ್ಕಂಥ ದೃಷ್ಟಿಯಿಂದ ತನ್ನ ವಾದವನ್ನು ಮುಖ್ಯಮಂತ್ರಿಗಳ ಸಭೆಯಲ್ಲಿ ಮುಂದಿಟ್ಟಿದೆ. ಇನ್ನೊಂದು ಒಳ್ಳೆಯ ಬೆಳವಣಿಗೆ ಏನೆಂದರೆ, ನಮ್ಮಪ್ಪೇ ತೀಕ್ಷ್ಣವಾಗಿ ಮಹಾರಾಷ್ಟ್ರದವರು ಕೂಡ ಆಂಧ್ರ ಸರಕಾರದವರ ಉದ್ದೇಶಿತ ಕಾಲುವೆಯ ಬಗ್ಗೆ ತೀವ್ರ ಅಸಮಾಧಾನ ಮತ್ತು ಅಸಮ್ಮತಿಯನ್ನು ವ್ಯಕ್ತಪಡಿಸಿದ್ದಾರೆ. 1990ನೇ ಇಸವಿಯಲ್ಲಿ ಮೈಸೂರಿನಲ್ಲಿ ಒಂದು ಸಭೆ ನಡೆಯಿತು. ಒಂದು ಮೈಸೂರಿನಲ್ಲಿ ನಡೆಯಿತು, ಇನ್ನೊಂದು ತಿರುಪತಿಯಲ್ಲಿ ನಡೆಯಿತು, ಮತ್ತೊಂದು ಮಹಾಬಲೇಶ್ವರದಲ್ಲಿ ನಡೆಯಬೇಕಾಗಿತ್ತು, ಅದು ಕಾರಣಾಂತರಗಳಿಂದ ಮುಂದಕ್ಕೆ ಹೋಗಿದೆ. ಆದರೆ ಒಂದು ವಿಚಾರವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ, ಬಚಾವತ್ ಅವಾರ್ಡ್‌ನ ಪ್ರಕಾರವೇ, ಯಾರೇ ಆಗಲಿ ಬಚಾವತ್ ಅವಾರ್ಡನ್ನು ಉಲ್ಲಂಘಿಸಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಯಾವುದೇ ಇನ್ಫ್ರಾಸ್ಟ್ರಕ್ಚರ್ ಮಾಡಿದರೂ ಕೂಡ, ಅಂಥವರಿಗೆ ಅದರ ಮೇಲೆ ಪ್ರಿಸ್ಕ್ರಿಪ್ಟಿವ್ ರೈಟ್ಸ್ ಸಿಗುವುದಿಲ್ಲ. ಇದನ್ನು ಕೂಡ ಬಚಾವತ್ ಅವಾರ್ಡ್‌ನಲ್ಲಿ ನಮೂದಿಸಿದ್ದಾರೆ. ಈ ದೃಷ್ಟಿಯಿಂದ ಮುಂದೆ ನಡೆಯತಕ್ಕಂಥ ಮುಖ್ಯಮಂತ್ರಿಗಳ ಸಭೆಯಲ್ಲಿ ಈ ವಿಚಾರವನ್ನು ಪರಸ್ಪರ ಮಾತುಕತೆಗಳ ಮೂಲಕ ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟರೆ ಏನೂ ತೊಂದರೆ ಇಲ್ಲ ಎನ್ನತಕ್ಕಂಥಾದ್ದನ್ನು ಹೇಳಬಯಸುತ್ತೇನೆ. ಆದರೆ ರಾಜ್ಯ ಸರಕಾರದ ಪರವಾಗಿ ಸ್ಪಷ್ಟಪಡಿಸಲಿಚ್ಛಿಸುತ್ತೇನೆ, ಏನು ಅವರು ಬೃಹತ್ ಕಾಲುವೆಯನ್ನು ನಿರ್ಮಾಣ ಮಾಡುತ್ತಿದ್ದಾರೆ, ನಮಗೆ ಯಾವ ನೀರನ್ನು ನಿಗದಿಗೊಳಿಸಿದ್ದಾರೆ, ಹೀಗೆ ನಿಗದಿಗೊಳಿಸಿರತಕ್ಕಂಥ ನೀರಿನ ಮೇಲೆ ಯಾವ ಪರಿಣಾಮವನ್ನೂ ಬೀರುವುದಕ್ಕೆ ನಾವು ಅವಕಾಶವನ್ನು ಕೊಡುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಇಷ್ಟೇನೆ. One of the parties has violated the Agreement. ಪ್ರಿಸ್ಕ್ರಿಪ್ಟಿವ್ ರೈಟ್ಸ್ ಎಂದು ಹೇಳುತ್ತಿದ್ದಾರೆ. ಅದರ ಆಧಾರದ ಮೇಲೆಯೇ ಸಾಕಷ್ಟು ಅಕ್ರಮ ಸಾಗುವಳಿಯ ಜಮೀನುಗಳನ್ನು on the basis of the prescriptive rights itself ಬಚಾವತ್ ಕಮಿಶನ್‌ನಲ್ಲಿ ಸಕ್ರಮಗೊಳಿಸಿದ್ದಾರೆ. One Party has violated it. If the party violates it, it ceases to have all the benefits from the Agreement. It is what the common law says. Whether this Government is going to say that we are not going to honour the terms and condtions of the Tribunal on the basis of this?

SRI S.M. KRISHNA:– The Krishna Tribunal has given Andhra Pradesh the liberty to use surplus waters without acquiring any rights whatsoever. As such if Andhra Pradesh Government has taken up this Telugu Ganga Project against this award of the Krishna Tribunal, since A.P. Government's share of Krishna waters is about 800 TMC and any encroachment on surplus waters, Karnataka has objected to it and it will continue to object it in the strongest possible terms, regardless of personalities.